## ಶತಾಯುಷಿ ಗುಟ್ಟು

ಶತಾಯುಷಿ ವೃದ್ಧರೊಬ್ಬರನ್ನು ಅಭಿನಂದಿಸಲು ಗುಂಡ ಅವರ ಮನೆಗೆ ಹೋದ. ಅವರೊಂದಿಗೆ ಕೆಲ ಹೊತ್ತು ಮಾತನಾಡಿದ ನಂತರ, 'ನಿಮ್ಮ ದೀರ್ಘಾಯುಷ್ಯದ ಗುಟ್ಟೇನು?' ಎಂಬ ಮಾಮೂಲಿ ಪ್ರಶ್ನೆ ಕೇಳಿದ. ಅದಕ್ಕವರು ನಕ್ಕು ಉತ್ತರಿಸಿದರು: 'ಗುಟ್ಟೂ ಇಲ್ಲ, ಏನೂ ಇಲ್ಲ, ನನ್ನ ವಯಸ್ಸಿನವರು ನಮ್ಮೂರಲ್ಲಿ ಯಾರೂ ಇಲ್ಲ. ಅದಕ್ಕೇ ನಾನು ಶತಾಯುಷಿ ಎಂದು ಹೇಳಿಕೊಂಡು ಬಂದೆ... ದಯವಿಟ್ಟು ಇದನ್ನು ಯಾರಿಗೂ ಹೇಳಬೇಡಿ.'

**ಶಂಕರೇಗೌಡ ತುಂಬಕೆರೆ**





## ಕಾಲ್ ಮಾಡಿದ್ರಾ?

ಎಲ್‌ಕೆಜಿಯಲ್ಲಿ ಓದುತ್ತಿದ್ದ ಜಾಹ್ನವಿ ತರಗತಿಯಲ್ಲಿ ತನ್ನ ಶಿಕ್ಷಕಿಯನ್ನು ಕೇಳಿದಳು: 'ಮ್ಯಾಮ್ ನಿನ್ನೆ ರಾತ್ರಿ ನಾನು ಮಲಗೊ ಸಮಯದಲ್ಲಿ ನೀವು ನಮ್ಮ ಡ್ಯಾಡೀಗೆ ಕಾಲ್ ಮಾಡಿದ್ರಾ?' ಅದಕ್ಕೆ ಶಿಕ್ಷಕಿ, 'ಇಲ್ವಲ್ಲ ಪುಟ್ಟಾ, ಯಾಕೆ?' ಎಂದು ಕೇಳಿದರು. 'ಕಾಲ್ ಬಂದು ಹೋದ ಮೇಲೆ ಮಮ್ಮಿ 'ಯಾರ ಕಾಲ್' ಎಂದು ಡ್ಯಾಡಿಯನ್ನು ಕೇಳಿದಳು. ಆಗ ಡ್ಯಾಡಿ, 'ಮಿಸ್ ಕಾಲ್' ಅಂದ್ರು. ಅದು ನಿಮ್ಮದೇ ಇರಬಹುದು ಅಂತ ಕೇಳಿದೆ' ಎಂದು ಮುಗ್ಧವಾಗಿ ನುಡಿದಾಗ ಟೀಚರ್ ತಮ್ಮಲ್ಲೇ ತಾವು ನಕ್ಕರು!

**ಕೆ.ಜಿ. ಭದ್ರಣ್ಣವರ**